ಕೆಂಪೇಗೌಡರ ಕನಸು ಮೀರಿ ಬೆಳೆದಿದೆ ಬೆಂಗಳೂರು ನಗರ. ವಿಶಿಷ್ಟ ಭೂರಚನೆಯೊಂದಿಗೆ ಆಹಾರ ಸಂಸ್ಕೃತಿ, ಕಲೆ, ವ್ಯಾಪಾರ–ವಹಿವಾಟು, ಆಚರಣೆ, ಧಾರ್ಮಿಕತೆ ಏನಿಲ್ಲವಿಲ್ಲಿ? ಫಲವತ್ತಾದ ಮಣ್ಣು, ಹದವಾದ ಮಳೆ, ಕಣ್ತುಂಬೋ ಹಸಿರು, ಕನ್ನಡಿಗರ ಪ್ರೀತಿಯ ಉಸಿರು, ಸಾಲದೇ ಬೆಂಗಳೂರು ಹಬ್ಬಲು... ಹರಡಲು...

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಬೆಂಗಳೂರಿಗೆ ವ್ಯಾಪಾರಕ್ಕಾಗಿ ಜನ ಬರ್ತಾ ಇದ್ರು, ಇದನ್ನ 1627ರ ಕೆಂಪೇಗೌಡರ ಶಾಸನದಲ್ಲಿ ಹೇಳಿದ್ದಾರೆ. ಅದರಲ್ಲೂ ಮುಖ್ಯವಾಗಿ ಎಲೆ, ಅಡಿಕೆ ಮೆಣಸು, ಶ್ರೀಗಂಧ ಈ ವಸ್ತುಗಳನ್ನು ಬೆಂಗಳೂರಿಂದ ತಂದೆ ಅಂತ ಹೇಳಿಕೊಳ್ಳೋದು ಪರಸ್ಥಳದವರಿಗೆ ಒಂದು ಘನತೆಯ ವಿಷಯ ಆಗಿತ್ತು.

ಹೀಗೆ ಲಹರಿ ಸಾಗಿತ್ತು...

'ಆಂಟೀ... ಆಂಟೀ... ಬಾಲ್ ಕೊಡಿ please...' ಅಂತ apartment ಮಗು ಸೆರಗು ಜಗ್ಗಿತು.

ಕೆಂಪೇಗೌಡರ ಕೋಟೆ ಒಳಗೆ ಇಳಿದಿದ್ದ ನನಗೆ ಎಚ್ಚರವಾಯಿತು. ಮಗುವಿಗೆ ಬಾಲ್ ತೆಗೆದುಕೊಟ್ಟು 'ಏನೋ ಪುಟ್ಟಾ... ಶಾಲೆಗೆ ಹೋಗಿಲ್ವ ಇವತ್ತು' ಎಂದೆ.

'ಇಲ್ಲ... ಚಕ್ಕರ್' ಅಂತ ಖುಷಿಯಿಂದ ಹೇಳಿದ.

'ಅಪ್ಪ ಅಮ್ಮ ಇವತ್ತು ಬೆಳ್ಳಿತೇರಿಗೆ ಕರ್ಕೊಂಡು ಹೋಗ್ತಾರೆ ಅಂದ'.

ಕೆಂಪೇಗೌಡರ ಕೋಟೆ ಒಳಗಿನಿಂದ ನನ್ನ ಮನಸ್ಸು ಬಸವನಗುಡಿ ಸಜ್ಜನ್ ರಾವ್ ವೃತ್ತದ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹಾರಿ ಬಂತು. ಬೆಳ್ಳಿತೇರು! ಚಂಪಾ ಷಷ್ಠಿಯ ದಿನ ನಡೆಯುವ ದೊಡ್ಡ ಉತ್ಸವ. ದೇವರನ್ನು ಬೆಳ್ಳಿರಥದಲ್ಲಿ ಕೂರಿಸಿ ಮೆರವಣಿಗೆ ಮಾಡಿ ಉತ್ಸವ ನಡೆಸುವುದು. ಇದಕ್ಕಾಗಿ ಸಾವಿರಾರು ಜನ ಸೇರುತ್ತಾರೆ. ಇದನ್ನು ಬರೆಯಲೇಬೇಕು ಎಂದುಕೊಂಡೆ.

ತಕ್ಷಣವೇ ಕಡ್ಲೆಕಾಯಿ ಪರಿಷೆ ಕೂಡ ನೆನಪಾಯಿತು. ಬಸವನಗುಡಿಯ ಜಾತ್ರೆ ಅದು. ನೂರಾರು ವರ್ಷ ಇತಿಹಾಸ ಹೊಂದಿರುವ ಬೆಂಗಳೂರಿನ ಸಂಭ್ರಮ ಸಡಗರ ಇವು. ಬೆಂಗಳೂರು ಬಸವನಗುಡಿಗೂ ಬೆಂಗಳೂರು ಮಲ್ಲೇಶ್ವರಕ್ಕೂ ಯಾವಾಗಲೂ ಒಂದು ಚೆಂದದ ಸುಂದರ ಆರೋಗ್ಯಕರ ಸ್ಪರ್ಧೆ!

ಕಡ್ಲೆಕಾಯಿ ಪರಿಷೆ, ಬೆಳ್ಳಿತೇರು ಅಂದ್ರೆ ಮಲ್ಲೇಶ್ವರದವರು ಕಾಡುಮಲ್ಲೇಶ್ವರ ಹುಣ್ಣಿಮೆ ಉತ್ಸವ, ಗಂಗಮ್ಮದೇವಿ ಜಾತ್ರೆ ಅಂತ ಹೇಳ್ತಾರೆ. ನ್ಯಾಷನಲ್ ಕಾಲೇಜು ಬಸವನಗುಡಿಯಲ್ಲಿದೆ ಅಂತ ಬಸವನಗುಡಿಯವರು ಹೇಳಿದರೆ, ಮಲ್ಲೇಶ್ವರದಲ್ಲಿ ಎಂಇಎಸ್ ಕಾಲೇಜು ಇದೆ ಅಂತಾರೆ ಆ ಕಡೆಯವರು.

ದೋಸೆ ಅಂದ್ರೆ ವಿದ್ಯಾರ್ಥಿ ಭವನ ಅಂತ ಬಸವನಗುಡಿಯವರು ಹೇಳಿದರೆ, ಬನ್ನಿ ಸಿಟಿಆರ್ ಅಂತ ಕರೀತಾರೆ ಮಲ್ಲೇಶ್ವರ ಮಂದಿ. ಮೆಟ್ರೋ, ಫ್ಲೈ ಓವರ್, ಸುರಂಗ ಮಾರ್ಗಗಳು, ಅಂಡರ್ ಪಾಸ್‌ಗಳು ಬರೋ ಮುಂಚೆ ಬೆಂಗಳೂರು ಚೆಂದವನ್ನು ನೋಡಬೇಕಿತ್ತು!

ಬೆಂಗಳೂರಲ್ಲಿ ಹುಟ್ಟಿ ಬೆಳೆದವರಿಗೆ ಆ ಸೊಗಡು ಗೊತ್ತು. ಬೆಂಗಳೂರು ಕೆ.ಆರ್. ರಸ್ತೆಯಲ್ಲಿ ಮರಗಳು ಎಷ್ಟು ಒತ್ತಾಗಿ ಇದ್ದವು ಅಂದರೆ ನಿಸಾರ್ ಅಹಮದ್, ಮಾಸ್ತಿ ಇವರೆಲ್ಲ ಆ ರಸ್ತೆಯಲ್ಲಿ ನಡೆಯುವಾಗ ಯಾವಾಗಲೂ ಛತ್ರಿ ಹಿಡಿದು ನಡೆಯುತ್ತಿದ್ದರು, ಯಾಕೆಂದರೆ ಹಕ್ಕಿಗಳ ಪಿಕ್ಕೆ ಬೀಳ್ತಾನೆ ಇರುತ್ತೆ ಅಂತ. ಅದಕ್ಕೆ ಇದು ಉದ್ಯಾನ ನಗರಿ.

ಲಾಲ್‌ಬಾಗ್, ಕಬ್ಬನ್ ಪಾರ್ಕ್ ಬೆಂಗಳೂರಿನ ಹೃದಯ ಭಾಗ. ಮನಸು ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ... ಬೆಂಗಳೂರು ಕನ್ನಡದ ಲೇಖನ ಏನು ಬರೆಯೋದು... ಮತ್ತೆ u turn ತೊಗೊಂಡು ಮನಸು ಅಲ್ಲಿಗೇ ಬಂತು.

'ರೀ! ಸ್ವಲ್ಪ ಬರ್ತೀರಾ? ಏನೂಂದ್ರೆ...' ಅಂತ ಕೇಳಿಸಿತು.

ಅಬ್ಬಾ...! ಈಗಲೂ ಬೆಂಗಳೂರಲ್ಲಿ ಹೀಗೆ ಮಾತಾಡುವವರು ಇದ್ದಾರಲ್ಲ ಅಂದುಕೊಂಡೆ. ಆಮೇಲೆ ಗೊತ್ತಾಯ್ತು ಅದು ಟೀವಿಲಿ ಬಂದ ಯಾವುದೋ ಚಿತ್ರದ ತುಣುಕು ಅಂತ.

ಹೌದು. ಹೌದು. ಅಣ್ಣಾವ್ರು, ಭಾರತಿ, ಕಲ್ಪನಾ, ಎಲ್ಲಾ ಹೀಗೇ ಅಲ್ಲವಾ ಮಾತಾಡ್ತಾ ಇದ್ದದ್ದು...

ಸಿನಿಮಾ, ನಾಟಕ, ಪದ್ಯ, ಪ್ರವಚನ, ರಾಜಕೀಯ, ವಿಧಾನಸೌಧ, ಪ್ರಕಟಣೆ, ಪ್ರಸಾರ, ಪತ್ರಿಕೆ, ಎಲ್ಲ ಕಡೆ ಇರೋದು ಇದೇ ಕನ್ನಡ ಅಲ್ಲವಾ...?

ಹಾಗಾದ್ರೆ ಕನ್ನಡ ಅಂದರೆ, ಇದೇ ಕನ್ನಡವಾ...? ಅನಿಸಿತು. ಬೇರೆಯ ಕಡೆಗಳ ಮಂದಿ ಇದನ್ನು ಒಪ್ಪುತ್ತಾರೋ ಇಲ್ಲವೋ...ಯಾಕೆ ಸುಮ್ಮನೆ... ಬೇರೆ ಏನಾದರೂ ಬರೆಯಬೇಕು... ಚಡಪಡಿಸಿಕೊಂಡು ಶತಪಥ ಓಡಾಡಿದೆ. ಕೊನೆಗೆ ಲೇಖನ ಬರೆಯಲು ಮೂಡ್ ಬರುತ್ತದೇನೋ ಎಂದು ಅಪಾರ್ಟ್ಮೆಂಟ್ ಟೆರೇಸ್ ಮೇಲೆ ಹೋಗಿ